ಕರಾಮತ್ತು ಎಂದು ಅಂದುಕೊಂಡಿದ್ದೇ ಮೊದಲಿದ್ದ ರೂಮಿನಿಂದ ಇನ್ನೊಂದು ರೂಮಿನಲ್ಲಿ ಪಂಕಜಳನ್ನು ಅಡಗಿಸಿ, ಕುಲಕರ್ಣಿಯ ಹತ್ತಿರ ಓಡಿಹೋಗಿದ್ದ. ಬಂದ ಪೊಲೀಸರನ್ನು ಕುಲಕರ್ಣಿ ಸಂಭಾಳಿಸುವದರಲ್ಲಿ ಗಂಟೆ ಹನ್ನೊಂದಕ್ಕೆ ಬಂದಿತ್ತು. ಈ ಪ್ರಕರಣದ ನಂತರ ಅಲ್ಲಿದ್ದ ಹುಡುಗರೆಲ್ಲ ಮೂರು ನಾಲ್ಕು ಗುಂಪುಗಳಲ್ಲಿ ಆಶ್ಚರ್ಯಚಕಿತರಾಗಿ ಮಾತನಾಡುತ್ತಿದ್ದರು. ಹಾಗಾದರೆ ಯಾರಿರಲು ಸಾಧ್ಯ ಎನ್ನುವ ಅಂದಾಜು, ಗುಮಾನಿಗಳೆಲ್ಲವೂ ನಡೆಯುತ್ತಿದ್ದವು. ಪೊಲೀಸರು ಹಾಸ್ಟೆಲಿನ ಒಳಗೆ ಹೊಕ್ಕುತ್ತಿದ್ದಂತೆ ಶಿರ್ಕ್ಯನಿಗೆ ಎಲ್ಲಿಂದ ವಾಸನೆ ಬಂತೋ ಇತ್ತಕಡೆ ತಲೆಯನ್ನೂ ಹಾಕದೇ ಆರ್. ಪಿ.ಸಿ ಲೇಔಟಿನಲ್ಲಿರುವ ತನ್ನ ಫ್ರೆಂಡ್ ಮನೆಗೆ ಹೋಗಿ ಏನೂ ಗೊತ್ತಿಲ್ಲದವನ ಹಾಗೆ ಕುಂತುಬಿಟ್ಟ. ಪೊಲೀಸರು ಬಂದಿದ್ದಾರೆ ಎಂದು ಗೊತ್ತಾದ ಮೇಲೆ ಬಶೀರನೂ 'ಸಿ' ಬ್ಲಾಕಿನಲ್ಲಿದ್ದ ಹಾಸ್ಟೆಲಿನ ಸ್ಟೋರ್ ರೂಮಿನಲ್ಲಿ ಅಡಗಿ ತನ್ನ ಖಾಸಾ ಚೇಲನಲ್ಲಿ ಹೊರಗಿನಿಂದ ಬೀಗ ಹಾಕಲು ಹೇಳಿದ. ನೀರು ಇಲ್ಲದೇ ಉಚ್ಚೆ ಎಲ್ಲಿಂದ ಬರಬೇಕು. ಸುಮಾರು ಎರಡು ತಾಸು ಅಲ್ಲಿದ್ದ ಹಳೆಯ ಸೈಕ್ಲೊಸ್ಟೈಲ್ ಮಶಿನ್ನಿನ ಶಾಯಿ, ಆಫೀಸಿನ ಲೆಕ್ಕ ಪತ್ರದ ಕಡತ, ಪೂರ್ತಿ ದೂಳಾದ ಮೇಜು ಕುರ್ಚಿ ಇತ್ಯಾದಿಗಳ ಮಧ್ಯ ಕುಳಿತ. ಮನಸಾರೆ ಆಕ್ಷಿ ಆಕ್ಷಿ ಎಂದು ಸೀನುವುದು ಹೇಗೆ. ಬಂದಾಗಲೆಲ್ಲಾ ಕೈಯಿಂದ ಜೋರಾಗಿ ಬಾಯನ್ನು ಮುಚ್ಚಿ ಹಿಂದಕ್ಕೆ ಕಳುಹಿಸುತ್ತಿದ್ದ. ತುಂಬಾ ತ್ರಾಸಾಗಿ ಕಿವಿ ಮತ್ತು ಕಣ್ಣುಗಳನ್ನು ಒಳಗಿಂದ ಹೊರಗೆ ಯಾರೋ ತಳ್ಳಿದಂತಾಗಿ ಸೀನಿಂದ ಉಂಟಾದ ಗಾಳಿ ಕಣ್ಣು ಕಿವಿಗಳನ್ನು ಕೀಳದಿದ್ದರೆ ಸಾಕು ಎನಿಸುತ್ತಿತ್ತು.

ತುಮಕೂರಿನಿಂದ ನೇರವಾಗಿ ಮಲ್ಲೇಶ್ವರದ ಎಂಟನೇ ಕ್ರಾಸಿಗೆ ಬಂದು ಇಳಿದ ಪಂಕಜ ಮಧ್ಯಾಹ್ನ ಸುಮಾರು ಮೂರು ಗಂಟೆಗೆ ಅಲ್ಲೇ ಇರುವ ಕೆ.ಸಿ. ಜನರಲ್ ಹಾಸ್ಪಿಟಲ್ಲಿನ ಎಮರ್ಜನ್ಸಿ ವಾರ್ಡ್ ಪಕ್ಕದ ದೇವಿ ಸಾಗರದಲ್ಲಿ ಮಿನಿ ಮೀಲ್ಸ್ ಎಂದು ಕರೆಯುವ ಮೂರು ಗುಂಡಿ ಪ್ಲೇಟಿನಲ್ಲಿ ಹಾಕಿಕೊಡುವ ಸ್ವಲ್ಪ ಅನ್ನ, ಸಾಂಬಾರ ಹಪ್ಪಳ ತಿಂದು, ಸ್ಟೀಲ್ ಚೈನ್ ಕಟ್ಟಿದ್ದ ಗ್ಲಾಸಿನಲ್ಲಿ ಸ್ವಲ್ಪ ನೀರು ಕುಡಿದಿದ್ದಳು. ತನ್ನ ಚಿಕ್ಕ ಬಾಟಲಿಯನ್ನು ಯಾವಾಗಲೂ ವ್ಯಾನಿಟಿ ಬ್ಯಾಗಿನಲ್ಲಿ ಇಟ್ಟುಕೊಳ್ಳುವವಳು ಇಂದು ಮರೆತಿದ್ದಳು. ಊಟದ ನಂತರ ಎದುರೇ ಇರುವ ಮಲ್ಲೇಶ್ವರ ಗ್ರೌಂಡನ್ನು ಮೂರು ನಾಲ್ಕು ಸುತ್ತು ಹಾಕಿ, ಎಷ್ಟಂತ ಸುತ್ತು ಹಾಕುವುದು ಎಂದು ಹೆಚ್ಚು ದೊಡ್ಡವರು ಮತ್ತು ಮಕ್ಕಳು ಒಟ್ಟಿಗೆ ಬಾಸ್ಕೆಟ್ ಬಾಲ್, ಕ್ರಿಕೆಟ್ ಆಡುವಲ್ಲಿ ಕುಳಿತು ಸ್ವಲ್ಪ ಕಾಲ ಕಳೆದಳು. ಕುಂತಷ್ಟು ಹೊತ್ತು ಮಕ್ಕಳನ್ನು ಕಣ್ಣು ತುಂಬ ನೋಡಿದಳು. ಈ ಮಕ್ಕಳೆಲ್ಲಾ ಬೆಳಿಗ್ಗೆ ಎಷ್ಟು ಹೊತ್ತಲ್ಲಿ ಎದ್ದಿದ್ದರೋ, ಏಳಲು ಎಷ್ಟು ಕಷ್ಟವಾಯಿತೋ, ಹೋಮ್‌ವರ್ಕ್ ನೆಪದಲ್ಲಿ ಎಷ್ಟುಜನ ಹೊಡೆತ ತಿಂದರೋ, ಇವರೆಲ್ಲ ನೇರವಾಗಿ ಸ್ಕೂಲಿಂದ ಬಂದರೋ ಎಂದೆಲ್ಲ ಅಂದುಕೊಳ್ಳುತ್ತಿದ್ದಳು. ಕೆಲವು ಬಿಳಿ ಮಕ್ಕಳು ಆಗಲೇ ತುಂಬ ಹೊತ್ತು ಆಡಿ ಕೆಂಪಕೆಂಪಗಾಗಿದ್ದವು. ಆಡಿ ಸುಸ್ತಾಗಿ ನೀರು ಕುಡಿಯಲು ವಿಶ್ರಾಂತಿ ತೆಗೆದುಕೊಳ್ಳಲು ಬರುವ ಹುಡುಗರೆಲ್ಲಾ ಪಂಕಜಳ ಪಕ್ಕದಲ್ಲಿ ನಿಂತು ತಮ್ಮ ತಮ್ಮ ಫ್ರೆಂಡ್ಸ್ ಹತ್ತಿರ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದರು. ಆ ಪರಿ ಏನೂ ಅರ್ಥವಾಗದೇ ಇದ್ದರೂ ಕಿವಿಗೆ ಅವರ ಮಾತು ಮುದ್ದಾಗಿ ಶಕ್ತಿಪೇಯದ ಜಾಹೀರಾತಿನ ಮಕ್ಕಳ ತರವೇ ಕೇಳಿಸುತ್ತಿತ್ತು. ಆಗಲೇ ಐದು ಗಂಟೆಯಾಗಿ ಪಾನಿಪುರಿ ಅಂಗಡಿಯವರು ತಮ್ಮ ಗಾಡಿಯನ್ನು ಪಕ್ಕಕ್ಕೆ ನಿಲ್ಲಿಸಿ ಆ ದಿನದ ಬೋಣಿಗೆಗಾಗಿ ಕಾಯಲು ಸುರು ಮಾಡಿದ್ದರು. ನೋಡುವ ಗಂಡಸು ಪೂರ್ತಿ ಪೋಲಿ ಎಂದು ಅನಿಸಿದರೆ ಅಷ್ಟು ಕಣ್ಣೆತ್ತಿ ನೋಡದವಳು, ಸ್ವಲ್ಪ ಸಭ್ಯ ಎಂದು ಗೊತ್ತಾದರೆ ನೋಡಿ ಮಾತನಾಡಿಸಲೂ ಹಿಂಜರಿಯದವಳು ತನ್ನ ಹತ್ತಿರದ ಫ್ರೆಂಡಿನ ಮೂಲಕ ಗುರುತಾದ ಶಿರ್ಕ್ಯ ಆರು ಗಂಟೆಗೆ ಹಾಸ್ಪಿಟಲ್ಲಿನ ಹತ್ತಿರ ನಿಲ್ಲು ಎಂದಿದ್ದಕ್ಕಾಗಿ ಬಡ ಬಡ ಹೊರಟು ಪಾನ್ ಅಂಗಡಿಯ ಮುಂದೆ ಬಂದು ನಿಂತುಬಿಟ್ಟಿದ್ದಳು. ಪೂರ್ತಿ ಪೋಲಿ ಎಂದು ಮನಸಿಲ್ಲದ ಮನಸ್ಸಿನಲ್ಲಿ ಹೋಗಿ ತನ್ನನ್ನು ಪ್ರೀತಿಯಿಂದ ನೋಡಿಕೊಂಡು ಬರುವಾಗ ಜೋರಾಗಿ ಅತ್ತ